# ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ

6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560003.

# KARNATAKA SECONDARY EDUCATION EXAMINATION BOARD

6th Cross, Malleshwaram, Bengaluru – 560003.

## ಬಹು ಆಯ್ಕೆ ಪ್ರಶ್ನೆ ಆಧಾರಿತ ಮಾದರಿ ಪ್ರಶ್ನೆಪತ್ರಿಕೆ

## Multiple Choice Question Based Model Question Paper

## 2020 - 21

## ಪತ್ರಿಕೆ / PAPER - 02

## ವಿಷಯ : ಪ್ರಥಮ ಭಾಷೆ ಕನ್ನಡ

## Subject : First Language Kannada

| | | |
|---|---|---|
| ಸಂಕೇತ ಸಂಖ್ಯೆ | : 01K | Code No : 01K |
| ಸಮಯ | : 03 ಘಂಟೆ | Time : 3 Hours |
| ಒಟ್ಟು ಪ್ರಶ್ನೆಗಳ ಸಂಖ್ಯೆ | : 40 + 40 + 40 = 120 | Total No. of Questions : 40 + 40 + 40 = 120 |
| ಗರಿಷ್ಠ ಅಂಕಗಳು | : 40 + 40 + 40 = 120 | Max. Marks : 40 + 40 + 40 = 120 |

---

**ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ / ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ನಿಮಗೆ ನೀಡಿರುವ ಉತ್ತರಪತ್ರಿಕೆ ಓ.ಎಂ.ಆರ್. (OMR) ನಲ್ಲಿ ಸರಿಯಾದ ಆಯ್ಕೆಯನ್ನು ಕಪ್ಪು / ನೀಲಿ ಬಾಲ್ ಪಾಯಿಂಟ್ ಪೆನ್‌ನಿಂದ ಶೇಡ್ ಮಾಡಿರಿ.**

**40 x 1 = 40**

1. ಸಾರಾ ಅಬೂಬಕ್ಕರ್ ಅವರ ಜನ್ಮಸ್ಥಳ

   A. ಧಾರವಾಡ  B. ಬಿಜಾಪುರ

   C. ಮೈಸೂರು  D. ಕಾಸರಗೋಡು

2. ಮುದುಕಿಯ ಕೈಯಲ್ಲಿದ್ದ ದೀಪದ ಬೆಳಕು ಹೊರಬೀಳದಂತೆ ದೀಪದ ಒಂದು ಭಾಗಕ್ಕೆ ಅಂಟಿಸಿದ ವಸ್ತು

   A. ಕಾಗದ  B. ಬಟ್ಟೆ

   C. ಎಲೆ  D. ಬುಟ್ಟಿ

3. ಭಾರತ ಸರ್ಕಾರವು ವಿಶ್ವೇಶ್ವರಯ್ಯನವರಿಗೆ ನೀಡಿದ ಪ್ರಶಸ್ತಿ

   A. ಭಾರತ ರತ್ನ  B. ಸರ್

   C. ಪದ್ಮಭೂಷಣ  D. ಜ್ಞಾನಪೀಠ

4. **ಶಬರಿಯ ಪ್ರಕಾರ ಗುರು ಸಿದ್ಧರು ಮೆಚ್ಚಿದಂತಹ ಸನ್ಮಂಗಳ ಮೂರ್ತಿ.**

A. ರಾಮ
B. ಲಕ್ಷ್ಮಣ
C. ದನು
D. ದಶರಥ

5. **ಸಾಮಾಜಿಕ ಕಾನೂನುಗಳ ಹರಿಕಾರ ಎಂದು ಹೆಸರಾದವರು**

A. ನಾಲ್ವಡಿ ಕೃಷ್ಣರಾಜ ಒಡೆಯರು
B. ವಿಶ್ವೇಶ್ವರಯ್ಯ
C. ಲಾರ್ಡ್ ಸಂಡ್ ಹರ್ಸ್ಟ್
D. ರಂಗಾಚಾರ್ಲು

6. **ವಚನಕಾರರ ದೃಷ್ಟಿಯಲ್ಲಿ ದೇವರೆಂದರೆ**

A. ಪ್ರಜ್ಞೆ
B. ಇಷ್ಟಲಿಂಗ
C. ವಚನ
D. ಭೂಮಿ

7. **ಶಾನುಭೋಗರ ರಾಜ ಭಕ್ತಿಯ ಲಾಂಛನ**

A. ಹುಲಿಯ ಧರ್ಮ ಶ್ರದ್ಧೆ
B. ಖಿರ್ದಿ ಪುಸ್ತಕ
C. ಭಗವದ್ಗೀತೆ
D. ಪುಣ್ಯಕೋಟಿ

8. **ವೃಕ್ಷ ಸಾಕ್ಷಿ ಪಾಠದ ಆಶಯ**

A. ಗುಣಕ್ಕಿಂತ ಹಣ ಮೇಲು
B. ಹಣಕ್ಕಿಂತ ಗುಣ ಮೇಲು
C. ಹಣ ಮತ್ತು ಗುಣಕ್ಕಿಂತ ದೇವರು ಮೇಲು
D. ಇಂದು ಕಷ್ಟ ಪಟ್ಟರೆ ನಾಳೆ ಸುಖ

9. **ಬೆಳಕಿಗೊಲಿದವರ್ ಉರಿದ ಬತ್ತಿಯ । ಕರುಕ ಕಾಣರು ಲಕ್ಷ್ಮಣ ಇದರ ಮುಂದುವರಿದ ಭಾಗ**

A. ಮರಣವಲ್ಲ ಮುಕ್ತಿ ಪ್ರಭೋ ಇದುವೆ ನನ್ನ ಪೂಣ್ಕೆ
B. ಬಾಳ ಸುತ್ತಿಹ ದೇವ ತೇಜವ । ಕಾಂಬರಿಗೆ ಇದೆ ಲಕ್ಷಣ
C. ಭೂಮಿ ತಾಯಿಯು ತನ್ನ ಮಗಳನು ಎಲ್ಲಿರಲಿ ಅದೆ ತವರೆನೆ
D. ರೂಪಿನಂತೆ ಮಾತು ಕೂಡ ಎನಿತುದಾರವಾಗಿದೆ !

10. **ಎ. ಎನ್. ಮೂರ್ತಿರಾವ್ ಅವರ ಪೂರ್ಣ ಹೆಸರು**

A. ಅಕ್ಕಿಹೆಬ್ಬಾಳು ನರಸಿಂಹ ಮೂರ್ತಿರಾವ್
B. ಅಕ್ಕಿಹೆಬ್ಬಾಳು ಮೂರ್ತಿರಾವ್ ನರಸಿಂಹ
C. ಅಕ್ಕಿಹೆಬ್ಬಾಳು ಮೂರ್ತಿರಾವ್
D. ಅಕ್ಕಿಹೆಬ್ಬಾಳು ನರಸಿಂಹ

11. ಮನೆಮಂಚಮ್ಮ ಇಂದು ಪೂಜಿತಳಾಗುತ್ತಿದ್ದುದು

A. ಗುಡಿಸಲಿನಲ್ಲಿ
B. ದೇವಸ್ಥಾನದಲ್ಲಿ
C. ಚಾವಣಿಯಿಲ್ಲದ ಗುಡಿಯಲ್ಲಿ
D. ಜನರ ಮನಸ್ಸಿನಲ್ಲಿ

12. ಧರ್ಮಬುದ್ಧಿ ತನ್ನ ಬೆಳಗಿನ ಹೊತ್ತನ್ನು ಕಳೆದದ್ದು ಹೀಗೆ

A. ಪುಸ್ತಕಗಳನ್ನು ಓದುತ್ತ
B. ದೇವಗುರು ಮತ್ತು ದ್ವಿಜರ ಪೂಜೆ ಮಾಡುತ್ತ
C. ತಿಂಡಿ ತಿಂದು ಮನೆಕೆಲಸ ಮಾಡುತ್ತ
D. ಊರೆಲ್ಲ ಅಡ್ಡಾಡುತ್ತ

13. 'ಎದೆ ತುಂಬಿ ಹಾಡಿದೆನು' ಕವನ ಸಂಕಲನದಿಂದ ಆಯ್ದ ಪದ್ಯಭಾಗ

A. ಸಂಕಲ್ಪ ಗೀತೆ
B. ಹಕ್ಕಿಹಾರುತಿದೆ ನೋಡಿದಿರಾ
C. ಹಸುರು
D. ಹಲಗಲಿ ಬೇಡರು

14. ಹಕ್ಕಿಯ ಗರಿಯಲ್ಲಿರುವ ಬಣ್ಣಗಳು

A. ಹಳದಿ – ಕೆಂಪು
B. ನೀಲಿ – ಹಸುರು
C. ಕರಿ – ನರೆ
D. ಬಿಳಿ – ಹೊಳೆ

15. ವೀರ ಕಲಿಗಳ ವೀರ ಸಾಹಸ, ಉಜ್ವಲ ಜೀವನವನ್ನು ವರ್ಣಿಸುವ ಕಥನಾತ್ಮಕ ಕಾವ್ಯಗಳು

A. ಲಾವಣಿಗಳು
B. ಗೀತನಾಟಕಗಳು
C. ಪ್ರವಾಸ ಕಥನಗಳು
D. ಲಲಿತ ಪ್ರಬಂಧಗಳು

16. ರವಿಸುತನ ಕಿವಿಯಲ್ಲಿ ಭಯವನ್ನು ಬಿತ್ತಿದವನು

A. ಕೃಷ್ಣ
B. ಫಲ್ಗುಣ
C. ಕುರುಪತಿ
D. ಕಲಿಭೀಮ

17. ಕವಿ ಕುವೆಂಪುರವರಿಗೆ ಸಂಜೆಯ ಬಿಸಿಲು ಈ ರೀತಿ ಕಂಡಿದೆ.

A. ಕೆಂಪಾಗಿ
B. ಹಸುರಾಗಿ
C. ಹಳದಿಯಾಗಿ
D. ಕಾರ್ಮೋಡದಂತೆ

18. ದುರ್ಯೋಧನನಿಗೆ ಯುದ್ಧವನ್ನು ಮಾಡದೆ ಪಾಂಡವರೊಂದಿಗೆ ಸಂಧಿ ಮಾಡಿಕೊಂಡು ಬದುಕಬೇಕೆಂಬ ಸಲಹೆಯನ್ನು ನೀಡಿದವರು.

A. ಕರ್ಣ
B. ಭೀಷ್ಮಾಚಾರ್ಯರು
C. ಧರ್ಮರಾಯ
D. ದುಶ್ಯಾಸನ

**19. ಶ್ರೀರಾಮನ ಯಜ್ಞಾಶ್ವವು ವಾಲ್ಮೀಕಿ ಮುನಿಯ ಆಶ್ರಮಕ್ಕೆ ಬರಲು ಕಾರಣ**

A. ಹುಲ್ಲಿನ ಹಸುರಿಗೆ ಎಳಸಿ

B. ವಾಲ್ಮೀಕಿ ಮುನಿಯ ತೋಟವನ್ನು ಹಾಳು ಮಾಡಲು

C. ಆಶ್ರಮದಲ್ಲಿ ಬೆಳೆದ ಹಣ್ಣುಗಳನ್ನು ತಿನ್ನಲು

D. ಆಶ್ರಮದ ಸೌಂದರ್ಯವನ್ನು ನೋಡಲು

**20. ಹಲಗಲಿಯ ಊರನ್ನೆಲ್ಲ ಲೂಟಿ ಮಾಡಿರಿ ಎಂದು ಹೇಳಿದ ಬ್ರಿಟಿಷ್ ಅಧಿಕಾರಿ.**

A. ಹೆಬಲಕ್ ಸಾಹೇಬ

B. ಚಟಿಕಾರ

C. ಕಾರ ಸಾಹೇಬ

D. ಟಾರಾ ಸಾಹೇಬ

**21. ನಕುಲ – ಸಹದೇವರ ತಾಯಿಯ ಹೆಸರು**

A. ಕುಂತಿ

B. ಮಾದ್ರಿ

C. ದ್ರೌಪದಿ

D. ಗಾಂಧಾರಿ

**22. ಕುವೆಂಪುರವರ ಆತ್ಮಕಥನ**

A. ಪಕ್ಷಿಕಾಶಿ

B. ನೆನಪಿನ ದೋಣಿಯಲ್ಲಿ

C. ಶ್ರೀರಾಮಾಯಣ ದರ್ಶನಂ

D. ಕಾನೂರು ಹೆಗ್ಗಡತಿ

**23. ಛಲವನ್ನೇ ಮರೆಯುವುದಾಗಿ ನಿರ್ಧರಿಸಿದವನು**

A. ಭೀಮ

B. ಅರ್ಜುನ

C. ದುರ್ಯೋಧನ

D. ಕರ್ಣ

**24. ದ. ರಾ. ಬೇಂದ್ರೆಯವರ ಕಾವ್ಯನಾಮ**

A. ಅಂಬಿಕಾತನಯದತ್ತ

B. ಕುವೆಂಪು

C. ವಿನಾಯಕ

D. ಪು.ತಿ.ನ.

**25. ಲವನು ರಾಮನ ಯಜ್ಞಾಶ್ವವನ್ನು ಈ ಗಿಡಕ್ಕೆ ಕಟ್ಟಿದನು**

A. ಬೇವು

B. ಬಾಳೆ

C. ಹೊಂಗೆ

D. ದಾಸವಾಳ

26. ಮತಗಳೆಲ್ಲವೂ ಪಥಗಳು ಎನ್ನುವ

A. ಹೊಸ ಭರವಸೆಗಳ ಕಟ್ಟೋಣ
B. ಹೊಸ ಎಚ್ಚರದೊಳು ಬದುಕೋಣ
C. ಪ್ರೀತಿಯ ಹಣತೆಯ ಹಚ್ಚೋಣ
D. ಮುಂಗಾರಿನ ಮಳೆಯಾಗೋಣ

27. ಸರ್ವಧರ್ಮ ಸಮ್ಮೇಳನವು ನಡೆದ ಸ್ಥಳ

A. ಚಿಕಾಗೊ
B. ಪ್ಯಾರಿಸ್
C. ಲಂಡನ್
D. ನ್ಯೂಯಾರ್ಕ್

28. ಕತ್ತಲೆ ಗವ್ವೆನ್ನುವ ಗುಡಿಸಲೊಳಗೆ ಬರಲು ಹೆದರಿದವರು

A. ಕಮ್ಮಾರ
B. ವಸಂತ
C. ಕುಂಬಾರ
D. ನೇಕಾರ

29. ಬದಿನಲ್ಲಿ ಹುಟ್ಟೋದು ಬದಿನಲ್ಲಿ ಬೆಳೆಯೋದು ಹೋಗೋರ ಮಂಜೆರಗ ಹಿಡಿಯೋದು

A. ಗರಕೆಯ ಹುಲ್ಲು
B. ಉತ್ತರಾಣಿ ಗಿಡ
C. ಬೀಸುಕಲ್ಲು
D. ತಾವರೆಬೇರು

30. ಭಗತ್‌ಸಿಂಗ್ ಬ್ರಿಟಿಷ್ ಸರ್ಕಾರದ ವಿರುದ್ಧ ಸೇಡು ತೀರಿಸಿಕೊಂಡಿದ್ದರ ಫಲ

A. ಮರಣದಂಡನೆಗೆ ಗುರಿಯಾದುದು
B. ಪರಮ ವೀರ ಚಕ್ರ ಪ್ರಶಸ್ತಿ ಪಡೆದುದು
C. ಸರ್ ಪದವಿ ಪಡೆದುದು
D. ಎಲ್ಲರಿಂದಲೂ ಶ್ಲಾಘನೆಗೆ ಒಳಗಾದುದು

31. ಒಂದು ಅಭಿಪ್ರಾಯದ ವಿವರಣೆ ಮುಂದೆ ತಿಳಿಸಿದಂತೆ ಇದೆ ಎಂದು ತೋರಿಸುವ ಸಂದರ್ಭದಲ್ಲಿ ಬಳಸುವ ಲೇಖನ ಚಿಹ್ನೆ

A. ವಾಕ್ಯವೇಷ್ಟನ ಚಿಹ್ನೆ
B. ಆವರಣ ಚಿಹ್ನೆ
C. ವಿವರಣಾತ್ಮಕ ಚಿಹ್ನೆ
D. ಉದ್ಧರಣ ಚಿಹ್ನೆ

32. ಕಡೆಗಣ್ಣು ಪದವು

A. ಅಂಶೀ ಸಮಾಸ
B. ಕ್ರಿಯಾ ಸಮಾಸ
C. ಬಹುವ್ರೀಹಿ ಸಮಾಸ
D. ಗಮಕ ಸಮಾಸ

33. ಕೊರೊನಾ ಮಹಾಮಾರಿ ಹೆಚ್ಚಾಗಿರುವುದರಿಂದ ಬಸ್ಸುಗಳ ಸಂಚಾರವನ್ನು ತಾತ್ಕಾಲಿಕವಾಗಿ ರದ್ದುಗೊಳಿಸಲಾಗಿದೆ. ಈ ವಾಕ್ಯದಲ್ಲಿರುವ ಅನ್ಯದೇಶೀಯ ಪದ

A. ಬಸ್ಸು
B. ತಾತ್ಕಲಿಕ
C. ಮಹಾಮಾರಿ
D. ಸಂಚಾರ

34. ಹಳಗನ್ನಡದ ಸಪ್ತಮೀ ವಿಭಕ್ತಿ ಪ್ರತ್ಯಯ

A. ಮ್
B. ಅಂ
C. ಒಳ್
D. ಅತ್ತಣಿಂ

35. ಉಪ್ಪಿಗಿಂತ ರುಚಿಯಿಲ್ಲ : ತಾಯಿಗಿಂತ

A. ಯೌವನವಿಲ್ಲ
B. ಬಂಧುವಿಲ್ಲ
C. ಮುಪ್ಪಿಲ್ಲ
D. ನೆಂಟರಿಲ್ಲ

36. ಎರಡು ಬೇರೆ ಬೇರೆ ವಾಕ್ಯಗಳಲ್ಲಿ ಅರ್ಥಸಾದೃಶ್ಯದಿಂದ ಬಿಂಬ ಪ್ರತಿಬಿಂಬ ಭಾವವು ತೋರಿ ಬಂದರೆ ಆ ಅಲಂಕಾರವು

A. ದೃಷ್ಟಾಂತಾಲಂಕಾರ
B. ಉಪಮಾಲಂಕಾರ
C. ರೂಪಕಾಲಂಕಾರ
D. ಉತ್ಪ್ರೇಕ್ಷಾಲಂಕಾರ

37. ಅಬ್ಬರ ಪದದಲ್ಲಿ ಕಂಡು ಬರುವ ಅಕ್ಷರ ಗಣ

A. ಮ ಗಣ
B. ತ ಗಣ
C. ಭ ಗಣ
D. ಯ ಗಣ

38. ಪಾದುಕಾ ಪದದ ತದ್ಭವ ರೂಪ

A. ಪೀಠಿಕೆ
B. ಹವುಗೆ
C. ಹವಗೆ
D. ಹಾವುಗೆ

39. ಕ್ರಿಯಾಪದದ ಸ್ಥಾನದಲ್ಲಿದ್ದು ವಾಕ್ಯದ ಅರ್ಥವನ್ನು ಪೂರ್ಣಗೊಳಿಸುವ ಅವ್ಯಯಗಳು

A. ಭಾವಸೂಚಕಾವ್ಯಯಗಳು
B. ಕ್ರಿಯಾರ್ಥಕಾವ್ಯಯಗಳು
C. ಅನುಕರಣಾವ್ಯಯಗಳು
D. ಸಾಮಾನ್ಯಾರ್ಥಕಾವ್ಯಯ

40. ತಾಯಿಗೆ ಪತ್ರ ಬರೆಯುವಾಗ ಪತ್ರದಲ್ಲಿ ಆರಂಭದ ಸಂಬೋಧನೆ ಹೀಗಿರಬೇಕು.

A. ತೀರ್ಥರೂಪರವರಿಗೆ
B. ಮಾತೃಶ್ರೀಯವರಿಗೆ
C. ಪೂಜ್ಯ ಗುರುಗಳೇ
D. ಮಾನ್ಯರೇ

ಕಚ್ಚಾ ಕಾರ್ಯಕ್ಕಾಗಿ / For Rough Work

## ಕಚ್ಚಾ ಕಾರ್ಯಕ್ಕಾಗಿ / For Rough Work